- 9 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ಪಾಪಗಳ ವಿಮೋಚನೆ

ಕೆಲವು ಉತ್ತಮವಾದ ನಿಜ ಹೃದಯಗಳು ಬಾಪ್ತಿಸ್ಮದ ಸರಳವಾದ ಬೋಧನೆಯನ್ನು ಸ್ವೀಕರಿಸುವದರಲ್ಲಿ ಸೋತು ಹೋಗಿರುವವು. ಯಾಕಂದರೆ ಅವರು ಅದು ಬಾಪ್ತಿಸ್ಮದ ಮೇಲೆ ಅತಿಶಯವಾದ ಮಹತ್ವವನ್ನು ಕೊಟ್ಟಿತು ಹಾಗೂ ಅದರ ಪರಿಣಾಮವಾಗಿ ಕ್ರಿಸ್ತನ ರಕ್ತದ ಬಲವನ್ನು ಕಡಿಮೆಯಾಗಿ ತಿಳಿದುಕೊಂಡಿತು ಎಂದು ಭಯಪಡುತ್ತಾರೆ.

ಮಾನವ ಜೀವಿಗಳಾದ ನಾವು, ದೇವರ ಸರಿಗಟ್ಟಲಾಗದ ಬೋಧನೆಯ ಪರಿಣಾಮಗಳ ಮೇಲೆ ನಾವು ನ್ಯಾಯತೀರಿಸಲಾರೆವು. ಹಾಗಿದ್ದರೂ, ಬಾಪ್ತಿಸ್ಮದ ಮೇಲೆ ಆತ್ಮನ ಬೋಧನೆಯನ್ನು ಅದರ ಸ್ವಾಭಾವಿಕವಾದ ಮತ್ತು ಸ್ಪಷ್ಟವಾದ ಅರ್ಥವಿರುವಂತೆ ಬಿಡುವುದು ಯಾವುದೇ ರೀತಿಯಲ್ಲಿ ರಕ್ತದ ಶುದ್ಧೀಕರಿಸುವ ಬಲದಿಂದ ದೂರಮಾಡುವದಿಲ್ಲ. ಎಲ್ಲಾ ವಿಧೇಯತೆಯು - ಸ್ವೀಕಾರ ಯೋಗ್ಯವಾಗಿರುವುದು ಒಬ್ಬನು ರಕ್ತದಲ್ಲಿ ನಂಬುವಂತೆ ಒಪ್ಪಿಸಿಕೊಡುವುದು - ವಿಧೇಯತೆಯಾಗಿರುವುದು. “ನಂಬಿಕೆಯ ಮುಖಾಂತರ, ಆತನ ರಕ್ತದಲ್ಲಿ” (ರೋಮಾಪುರ 3:25) ಕುರಿಮರಿಯಾದಾತನ ರಕ್ತದ ಶುದ್ಧೀಕರಿಸುವ ಬಲದ ಮೇಲೆ ಅವಲಂಭಿಸಿ, ನೋಡುವದರಿಂದ ಒಬ್ಬನು ದೇವರಿಗೆ ವಿಧೇಯನಾಗಬಹುದು - ಮತ್ತು ಈ ರೀತಿಯಲ್ಲಿ ಮಾತ್ರವೇ ನಿಜವಾಗಿಯೂ ವಿಧೇಯನಾಗುವನು. ಯಾವುದೇ ವಿಧೇಯತೆಯು ತನ್ನಲ್ಲಿ ತಾನೇ ರಕ್ಷಿಸಲಾರದು.

ನಂಬಿಕೆಯು ತನ್ನಷ್ಟಕ್ಕೆ ತಾನೇ ಬಾಪ್ತಿಸ್ಮದಂತೆ ರಕ್ಷಿಸಲು ಬಲವಿಲ್ಲದ್ದಾಗಿರುವುದು. ಹಾಗೆಯೇ ರಕ್ತವಿಲ್ಲದೆ ಆಶೀರ್ವಾದಕ್ಕಾಗಿರುವ ಪ್ರಯತ್ನವು ವ್ಯರ್ಥವಾಗಿರುವುದು. ನಂಬಿಕೆಯು ತಾನೇ, ಮಹಿಮೆಯುಳ್ಳ ಆದರೆ ನಮ್ಮ ಕರ್ತನ ಅಪಮಾನಕರವಾದ ಮರಣದಿಂದ ಮಾತ್ರವೇ ಬಲವುಳ್ಳದ್ದಾಗಿ ಮಾಡಲ್ಪಟ್ಟಿರುವುದು.

ದೇವರಿಗೆ ಪಾಪಿಗಳನ್ನು ರಕ್ಷಿಸುವದನ್ನು ಸಾಧ್ಯಮಾಡುವದಕ್ಕಾಗಿ ಅದು ಕ್ರಿಸ್ತನ ಮರಣವನ್ನು ತೆಗೆದುಕೊಂಡಿತು. ದೇವರು ಸುಳ್ಳು ಹೇಳಲಾರದಂತನಾಗಿದ್ದಂತೆ, ಅನ್ಯಾಯಗಾರನಾಗಿಯೂ ಆತನು ಇರಲಾರನು. ಆದುದರಿಂದ ದೇವರು ಕ್ರಿಸ್ತನನ್ನು, “... ಕೃಪಾಧಾರವಾಗಬೇಕೆಂದು ಮುಂದಿಟ್ಟನು ... ತಾನು ನೀತಿ ಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ” (ರೋಮಾಪುರ 3:25, 26). ಯೇಸುವು ಶಿಲುಬೆಯ ಮೇಲೆ ಮರಣ ಹೊಂದಲು ದೇವರು ಅಪ್ಪಣೆ ಕೊಟ್ಟಾಗ, ಬೇರೆ ರೀತಿಯಲ್ಲಿ ಆತನು ತೆರೆಯಲಾರದ ಬಾಗಿಲನ್ನು, ದಯೆಯ ಬಾಗಿಲನ್ನು ಆತನು ತೆರೆದನು. ಸಾವಿರಾರು ಜನರ ಕಡೆಗೆ ಆತನ ಪ್ರೀತಿ ದಯೆಯಿತ್ತು, ಮತ್ತು ಆತನ ಬಂಧನವಿಲ್ಲದ ಹೃದಯವು ದಯೆಯಿಂದ ತುಂಬಿತ್ತು; ಆದರೆ ಆತನು ಅದನ್ನು ಪಾಪಿಗಳಿಗೆ ವಿಸ್ತರಿಸಿ ಅದೇ ಸಮಯದಲ್ಲಿ ನ್ಯಾಯವಂತನಾಗಿರಲಿಕ್ಕಾಗಲಿಲ್ಲ. ಯೇಸುವಿನ ಮರಣವು ಪಾಪಿಗಳನ್ನು ರಕ್ಷಿಸಲು ದೇವರಿಗೆ ಸಾಧ್ಯವಾದದ್ದನ್ನಾಗಿ ಮಾಡಿತು. ಈ ರಕ್ತವನ್ನು

ಹೊರತು ಪಡಿಸಿ ಪಾಪಿಗಳಿಗೆ ರಕ್ಷಣೆಗಾಗಿ ಲಭ್ಯವಿರುವ ಬೇರೆ ಯಾವ ಮಾರ್ಗವನ್ನು ಕಲ್ಪಿಸಲಿಕ್ಕಾಗುವದಿಲ್ಲ. ಕ್ರಿಸ್ತನ ರಕ್ತವಿಲ್ಲದೆ ಮಾನವನ ಹೃದಯಕ್ಕೆ ಸಾಧ್ಯವಿರುವುದನ್ನು ನಂಬಬಹುದು, ಆದರೂ ಸರ್ವಶಕ್ತನು ಅವನನ್ನು ರಕ್ಷಿಸಲಾರನು. ಇಲ್ಲದಿದ್ದರೆ, ದೇವರು ತನ್ನ ಸ್ವಂತ ಮಗುವಿಗೆ ಜೀವರಕ್ತದ ಉಪಯೋಗದಲ್ಲಿ, ಮಗುವು ತನ್ನ ತಂದೆಯನ್ನು ತನ್ನ ಪ್ರಾಣದ ಎಲ್ಲಾ ಆಳದೊಂದಿಗೆ ಈ ರಕ್ತವನ್ನು ಉಪಯೋಗಿಸಬಾರದೆಂದು ಬೇಡಿ ಕೊಳ್ಳುವಾಗ, ಮಿತಿಮೀರಿದವನಾಗಿದ್ದಾನೆಯೋ! ಇಲ್ಲ, ಇಲ್ಲ, ನನ್ನ ಪ್ರಿಯನೇ ಪಾಪಿಗಳನ್ನು ರಕ್ಷಿಸಲಿಕ್ಕೆ ಆತನನ್ನು ಶಕ್ತನನ್ನಾಗಿ ಮಾಡುವದಕ್ಕೆ ಅವಶ್ಯವಾಗಿದ್ದಕ್ಕಿಂತ ಹೆಚ್ಚಾಗಿ ತನ್ನನ್ನು ಕೊಟ್ಟಿರುವದಿಲ್ಲ.

ನಂಬಿಕೆಯು ರಕ್ಷಿಸುತ್ತದೆ, ಮಾನಸಾಂತರವಿಲ್ಲದಿದ್ದರೆ ಅವರು ನಾಶವಾಗಿ ಹೋಗುವರು ಎಂದು ನಾವು ಜನರಿಗೆ ಬೋಧಿಸುವಾಗ ದೇವರು ತನ್ನನ್ನೇ ಕೊಟ್ಟ ಅಮೂಲ್ಯ ಬೆಲೆಯನ್ನು ನಾವು ಕಡಿಮೆಗೊಳಿಸುತ್ತಿರುವದಿಲ್ಲ. ರೋಮಾಪುರ 10:9ರಲ್ಲಿ "... ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತರವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು" ಎಂದು ಹೇಳಿದಾಗ ಪೌಲನು ನಮ್ಮ ಕರ್ತನು ಜಯಶಾಲಿ ಮರಣವನ್ನು ಕಡಿಮೆ ಮೌಲ್ಯದ್ದನ್ನಾಗಿ ಮಾಡಿದನೋ? ಬಾಪ್ತಿಸ್ಮವನ್ನು ಕುರಿತ ಸರಳ ಬೋಧನೆಯು ಶ್ರೇಷ್ಠವಾದ ಯೇಸುವಿನ ಮರಣವನ್ನು ಅಪಕೀರ್ತಿಗೊಳಿಸುತ್ತದೆಂದು ಭಯಪಡುವವರಲ್ಲಿ ಒಬ್ಬನೂ ಪೌಲನ ಈ ಬೋಧನೆಯಿಂದ ಎಂದೂ ದೂರಹೋಗಿ ರುವದಿಲ್ಲ. ಯೇಸುವನ್ನು ಕರ್ತನೆಂದು ಅರಿಕೆಮಾಡುವುದು ಅಪೊಸ್ತಲರಿಂದ ರಕ್ಷಣೆಯ ಒಂದು ಶರತ್ತಾಗಿ ಮಾಡಲ್ಪಟ್ಟಿದೆ. ಒಳ್ಳೆಯದು ಮತ್ತು ಸತ್ಯವಾದದ್ದು ಆಗಿರುವ ಎಲ್ಲಾದ್ದರ ಹೆಸರಿನಲ್ಲಿ ಒಬ್ಬನು ಕರ್ತನಾದ ಯೇಸು ಕ್ರಿಸ್ತನನ್ನು ಬಾಯಿಂದ ಅರಿಕೆಮಾಡುವುದರಿಂದ ರಕ್ಷಣೆಯು ಹೇಗೆ ಬರುವುದು? ಸಂಪೂರ್ಣವಾಗಿ ಕಾರ್ಯದಲ್ಲಿಯ ಯಾವುದೂ ರಕ್ಷಿಸಲಾರದು. ಅದು ರಕ್ಷಿಸಿದರೆ, ಆಗ ಎರಡು ಇಲ್ಲವೇ ಮೂರು ಸಲ ಅರಿಕೆ ಮಾಡುವುದು ಇನ್ನೂ ಹೆಚ್ಚು ಸಹಾಯಮಾಡಬಹುದು.

ಈ ದೃಷ್ಟಾಂತವನ್ನು ಯೋಚಿಸಿರಿ. ಒಂದು ಬೆಳೆಯನ್ನು ಕೃಷಿಮಾಡುವುದು ಬೆಳೆಯು ಅವಲಂಭಿಸಿರುವ ಶರತ್ತಾಗಿದೆ. ಅದು ಬೆಳೆಗೆ ಕಾರಣವಾಗುತ್ತದೆ, ಮತ್ತು ಸ್ವಲ್ಪ ಕೃಷಿಯು ಸ್ವಲ್ಪ ಬೆಳೆಯನ್ನು ತರುತ್ತದೆ. ಹೆಚ್ಚು ಕೃಷಿಯು ಹೆಚ್ಚಾದದ್ದನ್ನು ಬೆಳಿಸುತ್ತದೆ. ಹೆಚ್ಚು ಕ್ರಮದಿಂದ, ಹೆಚ್ಚು ವೈಜ್ಞಾನಿಕವಾಗಿ ಬೆಳೆಯನ್ನು ಕೃಷಿ ಮಾಡುವವನು, ಹೆಚ್ಚು ಉತ್ತಮ ಬೆಳೆಹೊಂದುವನು. ಬೆಳೆಯನ್ನು ಕೃಷಿಮಾಡುವುದು ನೇರವಾಗಿ ಸಹಾಯ ಮಾಡುವುದು. ಯೇಸುವನ್ನು ಕರ್ತನೆಂದು ಅರಿಕೆ ಮಾಡುವುದು, ಪಾಪಿಯನ್ನು ರಕ್ಷಿಸಲು ಸಹಾಯ ಮಾಡುವುದು. ಆದರೆ ಕೃಷಿ ಮಾಡುವುದು ಬೆಳೆಗೆ ಸಹಾಯಮಾಡುವಂತೆ ಇರುವದಿಲ್ಲ. ರಕ್ಷಣೆಗೆ ಅದು ಹೇಗೆ ಸಹಾಯ ಮಾಡುವುದು? ಅರಿಕೆಯು ರಕ್ತದಿಂದ ಬಲವನ್ನು ತಡ ವಾಗಿ ತೆಗೆದುಕೊಳ್ಳುವದರಿಂದ ಮಾತ್ರವೇ ಸಂಪೂರ್ಣವಾಗಿ ಸಹಾಯಮಾಡಬಹುದು; ಅದು ಆತ್ಮವನ್ನು ಸಂಬಂಧಿಸಲು ಸಹಾಯ ಮಾಡುವುದು ಇಲ್ಲವೇ ರಕ್ತದೊಂದಿಗೆ ಸಂಬಂಧದಲ್ಲಿ ತರುವುದು ಎಂದು ಬೇರೆ ಮಾತಿನಲ್ಲಿ ಹೇಳಬಹುದು.

"ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ, ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿ ಕೊಳ್ಳುವಂಥದೇ" (1 ಪೇತ್ರ 3:21) ಎಂದು ಪೇತ್ರನು ಹೇಳಿದಾಗ, ತನ್ನ ಕರ್ತನ ರಕ್ತದ ಮೌಲ್ಯವನ್ನು ಕಡಿಮೆ ಮಾಡುತ್ತಿದ್ದಿಲ್ಲ. ಆದರೆ ಅವನು ರಕ್ಷಿಸುವ ಅದರ ಬಲವನ್ನು ಹೊಗಳುತ್ತಿದ್ದನು. ನಂಬಿಕೆ, ಮಾನಸಾಂತರ,

ಅರಿಕೆ ಮತ್ತು ಬಾಪ್ತಿಸ್ಮಕ್ಕೆ - ಇವುಗಳಿಗೆ ರಕ್ಷಿಸಲು ಬಲವಿರುವದಿಲ್ಲ, ಗುಣವಿರುವದಿಲ್ಲ - ರಕ್ತದೊಂದಿಗಿನ ಅವುಗಳ ಸಂಬಂಧದ ಮುಖಾಂತರ ರಕ್ಷಿಸುವ ಬಲವು ಕೊಡಲ್ಪಟ್ಟಿರುವುದೆಂದು ಘೋಷಿಸುವುದು ರಕ್ತಕ್ಕೆ ಬಲವನ್ನು ಸಂಬಂಧಿಸುವುದಾಗಿರುತ್ತದೆ. ಈ ಸರಳವಾದ ಕೃತ್ಯಗಳು ಸರಳವಾಗಿ, ಸಂಪೂರ್ಣವಾಗಿ ಮತ್ತು ಕೇವಲವಾಗಿ ಪರಿಣಾಮಗೊಂಡು ದೇವರಿಗೆ ವಿಧೇಯತೆಯಾಗುವವು ಯಾಕಂದರೆ ಅದು ರಕ್ತದ ಕಲೆಗಳನ್ನು ಹೊಂದಿಕೊಂಡಿರುತ್ತವೆ. ಆ ರಕ್ತವು ಒಂದು ಹೋತದ ರಕ್ತವಾಗಿರುವದಿಲ್ಲ, ಆದರೇ ನಮ್ಮ ಕರ್ತನ ರಕ್ತವಾಗಿರುವುದು. ನಿಶ್ಚಯವಾಗಿಯೂ ಅಂಥ ಶಕ್ತಿಯನ್ನು ಹೊಂದಿಸುವುದು ಕ್ರಿಸ್ತನ ರಕ್ತದ ಮೌಲ್ಯವನ್ನು ಕಡಿಮೆ ಮಾಡುವದಿಲ್ಲ. ರಕ್ತದಿಂದ ತನ್ನ ಎಲ್ಲಾ ಗುಣವನ್ನು ಹೊಂದಿಕೊಳ್ಳುವ ವಿಧೇಯತೆಯ ಕಾರ್ಯವನ್ನು ಕುರಿತ ಯಾವುದೇ ಸರಳ ಬೋಧನೆಗೆ ಭಯಪಡಬೇಕಾಗಿಲ್ಲ ಇಲ್ಲವೇ ತಪ್ಪಿಸಿಕೊಳ್ಳಬೇಕಾಗಿಲ್ಲ.

ನಂಬುವ, ಮಾನಸಾಂತರಪಡುವ ಮತ್ತು ಅರಿಕೆಮಾಡುವ ಸರಳ ಕೃತ್ಯಗಳನ್ನು ದೇವರು ರಕ್ತದಿಂದ ಪಾವನಗೊಳಿಸಿದ್ದಾನೆ. ರಕ್ತವಿಲ್ಲದೇ ಇವುಗಳಲ್ಲಿ ಒಂದಾದರೂ ಹೊಂದಿಕೊಳ್ಳದೇ ಇರುವಾಗ, ಆತನು ರಕ್ತದ ಮುಖಾಂತರ ಈ ಕೃತ್ಯಗಳನ್ನು ಪರಿಣಾಮಕಾರಿಯಾದವುಗಳನ್ನಾಗಿ ಮಾಡಿದ್ದಾನೆ. ಆತನು ಇದನ್ನು, ನಮ್ಮ ಕರ್ತನ ರಕ್ತದ ರಕ್ಷಿಸುವ ಬಲದಿಂದ ಯಾವುದೇ ರೀತಿಯಲ್ಲಿ ಬೇರ್ಪಡಿಸದೇ ನಿಜವಾಗಿಯೂ ಮಾಡಿದ್ದರೆ, ಒಬ್ಬನ ಹೃದಯದಲ್ಲಿ ನಂಬಿಕೆಯ ವ್ಯಕ್ತಪಡಿಸುವಿಕೆಯಂತೆ, ನೀರಿನಲ್ಲಿ ದೇಹದ ಹೂಣಿಡುವಿಕೆಯ ಸರಳ ಕಾರ್ಯದಿಂದ ಅಷ್ಟನ್ನು ಆತನು ಮಾಡದಿರುವನೇ? ನಂಬುವದಕ್ಕೆ, ಮಾನಸಾಂತರಪಡುವದಕ್ಕೆ ಮತ್ತು ಅರಿಕೆ ಮಾಡುವದಕ್ಕೆ ರಕ್ತದ ರಕ್ಷಿಸುವ ಶಕ್ತಿಯನ್ನು ಕಡಿಮೆಮಾಡದೇ ಆತನು ಮಹತ್ವ ಕೊಟ್ಟಿರಬೇಕಾದರೆ, ಬಾಪ್ತಿಸ್ಮದ ಬಗೆಗೂ ಅದೇ ಸಂಗತಿಯನ್ನು ಆತನು ಮಾಡಬಲ್ಲವನಾಗಿದ್ದಾನೆ. ಆತನ ಚಿತ್ತವನ್ನು ತಿಳಿದವರು ಮಾತ್ರವೇ ನಿಜವಾಗಿಯೂ ಅರ್ಥಮಾಡಿಕೊಳ್ಳಬಲ್ಲರು.

ನಮ್ಮ ಅಭಿಪ್ರಾಯಗಳನ್ನು ಮತ್ತು ಪೂರ್ವ ಕಲ್ಪಿತ ಉದ್ದೇಶಗಳನ್ನು ಬಿಟ್ಟು ಬಿಡೋಣ! ನಮ್ಮ ಪಂಗಡದ ಭಾವವನ್ನೂ ಒಂದು ಪಕ್ಷದ ಆಸಕ್ತಿಗೆ ಅನುಸಾರವಾಗಿ ಪರಿಶುದ್ಧಾತ್ಮನು ಹೇಳಿರಬಹುದಾದ ವಿಚಾರಗಳನ್ನೂ ಬಿಟ್ಟುಬಿಡೋಣ. ಸತ್ಯದೊಂದಿಗೆ ಅವುಗಳ ಸಂಬಂಧವಿರುವದಿಲ್ಲ. ದೇವರು ಏನು ಹೇಳಿದ್ದಾನೆ ಮತ್ತು ಆತನ ಅರ್ಥವೇನು? ಎಂದು ಮಾತ್ರ ಕೇಳೋಣ.

ನಮ್ಮ ಹಿಂದಿನ ಪಾಠದಲ್ಲಿ, ಪಂಚಾಶತ್ತಮ ದಿನದಂದು ಪೇತ್ರನು ಮಾಡಿದ ಪ್ರಸಂಗದ ಅರ್ಥದ ಮೇಲೆ ಮೂವರು ಪ್ರಸಿದ್ಧ ಪಂಡಿತರ ವ್ಯಾಖ್ಯಾನಗಳನ್ನು ಯೋಚಿಸಿದೆವು. ಮಾನಸಾಂತರ ಮತ್ತು ಬಾಪ್ತಿಸ್ಮವು ಪಾಪಗಳ ಪರಿಹಾರವನ್ನು ಹೊಂದಿಕೊಳ್ಳುವದಕ್ಕಾಗಿದ್ದವು ಮತ್ತು ದೇವರು ಪೇತ್ರನಲ್ಲಿಯ ತನ್ನ ಪರಿಶುದ್ಧಾತ್ಮನಿಂದ ಜನರಿಗೆ ಅವರು ತಮ್ಮ ಪಾಪಗಳ ಪರಿಹಾರವನ್ನು ಸ್ವೀಕರಿಸುವದಕ್ಕಾಗಿ ಬಾಪ್ತಿಸ್ಮ ಮಾಡಿಸಿಕೊಳ್ಳಬೇಕೆಂದು ನಿಜವಾಗಿ ಬೋಧಿಸಿದನೆಂದು ಎಲ್ಲಾ ಮೂರು ಜನ ಪಂಡಿತರು ಒಪ್ಪಿಕೊಂಡರು. ಯಾವುದೇ ಪಂಡಿತನು, ಇದು ಪೇತ್ರನ ಭಾಷೆಯ ಅತೀ ಸ್ವಾಭಾವಿಕವಾದ ಮತ್ತು ಸ್ಪಷ್ಟವಾದ ಅರ್ಥವಾಗಿದೆ ಎಂಬುದನ್ನು ಅಲ್ಲಗಳೆಯಲಾರರು ಎಂದು ನಾನು ಭಾವಿಸುತ್ತೇನೆ. ತಾವು ಕಾಪಾಡಬೇಕಾದ ತತ್ವ ಇಲ್ಲವೇ ಬೆಂಬಲಿಸ ಬೇಕಾದ ಒಂದು ಪಕ್ಷವುಳ್ಳವರು ಮಾತ್ರವೇ, ಈ ಸ್ಪಷ್ಟವಾದ ಅರ್ಥವನ್ನು ಅಲ್ಲಗಳೆ ಯುವರು ಎಂದು ನಾನು ಹೇಳಬಲ್ಲೆನು.

ನಾನು ಆಗಲೇ ಉಲ್ಲೇಖಿಸಿದ, ಪ್ರಸಿದ್ಧ ಬ್ಯಾಪ್ಟಿಸ್ಟ್ ಪಂಡಿತ ಜೇಮ್ಸ್ W. ವಿಲ್‌ಮರ್ತ್, ಹೀಗೆ ಹೇಳಿದ್ದಾನೆ,

> ಕ್ಯಾಂಬೇಲ್ಲಿಸಮ್ ದಂತೆ, ಆ ಭೂತವು ಅನೇಕ ಒಳ್ಳೆಯ ಜನರನ್ನು ಕಾಡುತ್ತದೆ ಮತ್ತು ಕೆಟ್ಟ ವ್ಯಾಖ್ಯಾನದಲ್ಲಿ ಬಹಳವಾಗಿ ಅವರನ್ನು ಭಯಪಡಿಸುತ್ತದೆ, ನಮಗೆ ವಿರೋಧವಾಗಿರುವ ಅವರ ಪರವಾಗಿರುವ ಜಗತ್ತಿನ ಪಾಂಡಿತ್ಯದೊಂದಿಗೆ, ಕ್ಯಾಂಬೆಲ್ಲೈಟರನ್ನು ಸತ್ಯದ ಜಯಶಾಲಿಗಳನ್ನಾಗಲಿ ಬಿಟ್ಟು, ಸುಳ್ಳು ಭಾಷಾಂತರವನ್ನು ಕಾಪಾಡಿಕೊಂಡು ಹೋಗುವದರಿಂದ ನಾವೇನನ್ನು ಸಾಧಿಸುತ್ತೇವೆ?[1]

ಸತ್ಯವನ್ನು ಪ್ರೀತಿಸುವ ಎಲ್ಲರೂ ಮಿ. ವಿಲ್‌ಮಾರ್ತನಂಥ ಜನರು ಪಕ್ಷಕ್ಕಿಂತ ಹೆಚ್ಚಾಗಿ ಪಾಂಡಿತ್ಯವನ್ನೂ ಸತ್ಯವನ್ನೂ ಗೌರವಿಸುವಾಗ ಸಂತೋಷಪಡುತ್ತಾರೆ. ಪಕ್ಷದ ಆಸಕ್ತಿಯಿದ್ದರೂ, ಅಂಥ ಜನರು ದೇವರ ವಾಕ್ಯದ ನಿಜವಾದ ವ್ಯಾಖ್ಯಾನಗಳನ್ನು ಕೊಡಲು ಆತ್ಮದಲ್ಲಿ ಸಾಕಷ್ಟು ದೊಡ್ಡವರಾಗಿರುತ್ತಾರೆ ....

ಪಾಪಗಳು ಅಳಿಸಿಹೋಗುವಂತೆ ಪಶ್ಚಾತ್ತಾಪ ಪಟ್ಟ ವಿಶ್ವಾಸಿಗಳು ಬಾಪ್ತಿಸ್ಮ ಹೊಂದಬೇಕೆಂದು ಪೇತ್ರನು ಬೋಧಿಸಿದನು, .... ಒಬ್ಬನು ಕ್ರೈಸ್ತರಾಗಿರಬಹುದು - ಕೇವಲ ಒಬ್ಬ ಕ್ರೈಸ್ತನಾಗಿರಬಹುದು - ಮತ್ತು ಇದೇ ತತ್ವವನ್ನು ನಂಬಬಹುದು ಎಂಬ ನಿಶ್ಚಿತತೆ ನನಗಿದೆ; ಯಾಕಂದರೆ ಪೇತ್ರನು ಒಬ್ಬ ಕ್ರೈಸ್ತನಾಗಿದ್ದನು - ಕೇವಲ ಒಬ್ಬ ಕ್ರೈಸ್ತನಾಗಿದ್ದನು - ಮತ್ತು ಅವನು ಅದನ್ನು ನಂಬಿದನು ಮತ್ತು ಬೋಧಿಸಿದನು. ಯಾವುದೇ ಗುಂಪಾಗಲೀ ಇಲ್ಲವೇ ಬೋಧಕನಾಗಲೀ ಈ ಸಭಾಪಂಗಡತ್ವದ್ದಲ್ಲದ ಬೋಧನೆಯನ್ನು ಬೆಂಬಲಿಸುವಾಗ ನನಗೆ ಬಹಳ ಸಂತೋಷವಾಗುತ್ತದೆ. ಅಂಥ ಬೋಧನೆಯು ಈ ಹಂತದಲ್ಲಿ, ಕೇವಲ ಕ್ರೈಸ್ತರಾಗಿರಲು ಹೋರಾಡುತ್ತಿರುವವರ ಮತ್ತು ಯಾವುದೇ ಸಭಾಪಂಗಡಕ್ಕೆ ಸೇರದವರ ಆದರೆ ಅವರು ರಕ್ಷಿಸಲ್ಪಟ್ಟಾಗ ಕರ್ತನಿಂದ ದೇವರ ಸಭೆಗೆ ಸೇರಿಸಲ್ಪಟ್ಟವರ ಬೈಬಲಿನ ಬೋಧನೆಯೊಂದಿಗೆ ಒಪ್ಪಿಕೊಳ್ಳುತ್ತದೆ. ಎಲ್ಲಾ ಯಥಾರ್ಥ ಹೃದಯಗಳು ತಮ್ಮ ಎಲ್ಲಾ ಬೋಧನೆಯಲ್ಲಿ ಸಭಾಪಂಗಡ ತ್ವವಲ್ಲದ್ದಾಗಿರುವದನ್ನು ನನಗೆಷ್ಟೋ ಸಂತೋಷವಾಗುತ್ತದೆ! ಕ್ರಿಸ್ತನಲ್ಲಿ ಯಾವುದೇ ಯಾಥಾರ್ಥವಾದ ವಿಶ್ವಾಸಿಯು ಸ್ಪಷ್ಟವಾದ ವ್ಯಾಖ್ಯಾನವನ್ನು ಸ್ವೀಕರಿಸಿ, ಬಾಪ್ತಿಸ್ಮವನ್ನು ಮುಳುಗೇಳಿಸುವಿಕೆಯಂತೆ ಬೋಧಿಸಿದರೆ, ಅವನು ಜಗತ್ತಿನಲ್ಲಿಯ ಪ್ರತಿಯೊಬ್ಬ ಸಭಾಪಂಗಡದವನಲ್ಲದ ಕ್ರಿಸ್ತನೊಂದಿಗೆ "ಒಂದೇ ಹೃದಯವೂ ಆತ್ಮವೂ" ಉಳ್ಳವನಾಗಿರುವನು.

ಕೇವಲ ಕ್ರೈಸ್ತರಾಗಿರಲು ನಾವು ನಿಜವಾಗಿಯೂ "ಪಕ್ಷಗಳನ್ನೂ" "ಗುಂಪುಗಳನ್ನೂ" ಮತ್ತು ಸಭಾಪಂಗಡತ್ವವನ್ನೂ ಬಿಟ್ಟು ಕೊಡಲು ಸಿದ್ಧರಾಗಿರುವೆವೋ? ದೇವರ ಮಕ್ಕಳನ್ನು ಒಂದು ಗೂಡಿಸಲು ನಾವು ಮಾಡಬಹುದಾದ್ದನ್ನು ಮಾಡಲು ನಾವು ಸಿದ್ಧರಾಗಿರುವೆವೋ? ಸಭಾಪಂಗಡತ್ವವಲ್ಲದ ಪ್ರಂಸಗಿಯಾಗಿರಲು, ಪಾಪಗಳ ಪರಿಹಾರವನ್ನು ಹೊಂದುವದಕ್ಕಾಗಿ ಬಾಪ್ತಿಸ್ಮವನ್ನು ಪೇತ್ರನು ಆಜ್ಞಾಪಿಸಿದ್ದನ್ನು ಒಬ್ಬನು ಪ್ರಸಂಗಿಸತಕ್ಕದ್ದು. ಹಾಗೆ ಬೋಧಿಸುವದರಲ್ಲಿ, ಅವನು ಮನುಷ್ಯನ ಬೋಧನೆಯನ್ನಲ್ಲ, ಆದರೆ ಕ್ರಿಸ್ತನ ಬೋಧನೆಯನ್ನು ಬೆಂಬಲಿಸುತ್ತಿರುವನು. ತನ್ನ ಬೋಧನೆಯನ್ನು ಕ್ರಿಸ್ತನ ಬೋಧನೆ ಎನ್ನದೇ ಬೇರೆಯದು ಎಂದು ಹೆಸರಿಡುವವನು ಕ್ರಿಸ್ತನನ್ನೂ ಮತ್ತು ಆತನ ಬೋಧನೆಯನ್ನೂ ತಪ್ಪಾಗಿ ಪ್ರತಿನಿಧೀಕರಿಸುವವನಾಗಿದ್ದಾನೆ. ಕ್ರಿಸ್ತನು ತನ್ನ ರಕ್ತದಿಂದ ಈ ಬೋಧನೆಯನ್ನು ಕಲೆಗೊಳಿಸಿದ್ದಾನೆ; ಆದುದರಿಂದ ಅದು ಆತನದಾಗಿದೆ, ಮತ್ತು ಅದರಿಂದ ಆತನು ಎಲ್ಲಾ ಗೌರವಕ್ಕೆ ಅರ್ಹನಾಗಿದ್ದಾನೆ.

ಟಿಪ್ಪಣಿ

[1]James W. Willmarth, in Baptist Quarterly (July 1877): 304-5. ಸಂಪಾದಕರ ಟಿಪ್ಪಣಿ ನೋಡಿರಿ.

## ನಂಬಿಕೆ ಮತ್ತು ನೋಟ

ನಾವು ನೋಡುವವರಾಗಿ ನಡಿಯದೇ ನಂಬುವವರಾಗಿಯೇ ನಡೆಯುತ್ತೇವೆ (2 ಕೊರಿಂಥ 5:7).

*ನಂಬಿಕೆಯು ನೋಟಕ್ಕಿಂತ ಹೆಚ್ಚು ಬಲವುಳ್ಳದ್ದಾಗಿದೆ.*

ನಂಬಿಕೆಯು ಅತೀ ಕಠಿಣವಾದ ಶ್ರಮೆಗಳನ್ನು ಗುಣುಗುಟ್ಟದೇ ಸಹಿಸಿಕೊಳ್ಳಲು ನಮ್ಮನ್ನು ಶಕ್ತರನ್ನಾಗಿ ಮಾಡುತ್ತದೆ. ಈ ಹೇಳಿಕೆಯು ಈ ಸತ್ಯಕ್ಕೆ ಉದಾಹರಣೆಯಾಗಿ ಬೈಬಲು ಉತ್ತಮವಾದ ಉದಾಹರಣೆಗಳಿಂದ ತುಂಬಿಕೊಂಡಿರುತ್ತದೆ ಮತ್ತು ಸಭಾ ಚರಿತ್ರೆಯು ಅದರ ಪರವಾಗಿ ಆಶ್ಚರ್ಯಕರವಾದ ಸಾಕ್ಷಿಗಳನ್ನು ಹೊಂದಿಕೊಂಡಿದೆ ....

ನಾವು ಅತಿದೊಡ್ಡ ಗಂಡಾಂತರಗಳನ್ನು ಎದುರಿಸುವಾಗ ನಂಬಿಕೆಯು ನಮಗೆ ಧೈರ್ಯವನ್ನು ಕೊಡುವುದು ಮತ್ತು ನಮ್ಮ ಮಾರ್ಗವನ್ನು ಬೆಳಗಿಸುವುದು ಮಹಿಮೆಯುಳ್ಳ ಸಂಗತಿಯಾಗಿದೆ. ಬಹಳ ಸಮಯದಿಂದ ಸಮುದ್ರದ ತೆರೆಗಳ ಅಬ್ಬರವನ್ನು ಸಹಿಸಿದ ಒಂದು ಹಡಗವು ಕೊನೆಗೆ, ಮುಳುಗಿ ಹೋಗಲಿಕ್ಕಿತ್ತು. ಒಬ್ಬ ಮನುಷ್ಯನನ್ನು ಬಿಟ್ಟು ಹಡಗಲ್ಲಿದ್ದ ಎಲ್ಲರೂ ಭಯ ಕುತೂಹಲಗಳಿಂದ ಕಂಗಾಲಾಗಿದ್ದರು, ಆದರೆ ಅವನು ಅವರಿಗೆ ಭಯಪಡಿಸುತ್ತಿದ್ದ ಗಂಡಾಂತರಕ್ಕೆ ಭಯಪಡದೇ ಧೈರ್ಯದಿಂದ ಇದ್ದನು. ಅವನ ಹೆಂಡತಿ ಅವನ ಶಾಂತವಾದ, ಮನೋಸ್ಥೈರ್ಯವನ್ನು ನೋಡಿ, ಅದರ ಅರ್ಥವನ್ನು ತಿಳಿದುಕೊಳ್ಳಲಾಗದೆ, ಆಕೆ ಅವನಿಗೆ, ಅಂಥ ಭಯಾನಕವಾದ ನಾಶನದ ಎದುರಿನಲ್ಲಿ ಸ್ಥಿರಚಿತ್ತನಾಗಿ ಕಂಡುಕೊಳ್ಳುತ್ತಿರುವುದು ಹೇಗೆ ಎಂದು ಪ್ರಶ್ನಿಸಿದಳು. ಅವನು ಕೂಡಲೇ ಖಡ್ಗವನ್ನು ಹೊರದೆಗೆದು, ಆಕೆಯ ಹೃದಯದ ಕಡೆಗೆ ಹಿಡಿದನು: "ಈ ಖಡ್ಗದ ಬಗ್ಗೆ ನಿನಗೆ ಹೆದರಿಕೆಯಿದೆಯೋ?" ಎಂದು ಕೇಳಿದನು. ಆಕೆಯ ಗಲ್ಲಗಳ ಮೇಲೆ ಕಣ್ಣೀರು ಸುರಿಯುತ್ತಿರುವಂತೆ "ಇಲ್ಲ" ಎಂದು ಉತ್ತರ ಕೊಟ್ಟಳು. "ಯಾಕೆ ಅದರ ಬಗ್ಗೆ ನಿನಗೆ ಭಯವಿಲ್ಲ?" ಎಂದು ಅವನು ಮುಂದುವರಿಸಿದನು. "*ಯಾಕಂದರೆ, ಅದು ನನ್ನ ಪ್ರೀತಿಯುಳ್ಳ ಪತಿಯ ಕೈಗಳಲ್ಲಿರುವುದು*" ಎಂದು ಆಕೆ ಹೇಳಿದಳು. "ಹಾಗೆಯೇ ನಾನೂ ಸಮುದ್ರಗಳಿಗೆ ಭಯಪಡುವದಿಲ್ಲ," "*ಯಾಕಂದರೆ ಅದು ನನ್ನ ಪರಲೋಕದ ತಂದೆಯ ಕೈಯಲ್ಲಿರುವುದು. ಆತನು ನನ್ನನ್ನು ಪ್ರೀತಿಸುತ್ತಾನೆ ಮತ್ತು ನನಗೆ ಎಲ್ಲಾ ಒಳ್ಳೇದನ್ನ ಮಾಡುತ್ತಾನೆ ಎಂದು ಬಲ್ಲೆನು*" ಎಂದು ಅವನು ಹೇಳಿದನು. ಈ ಮನುಷ್ಯನು ನಂಬಿಕೆಯಿಂದ ನಡೆದನು ಮತ್ತು ನಂಬಿಕೆಯು ಅವನಿಗೆ ಪರಿಪೂರ್ಣ ಸಮಾಧಾನ ಕೊಟ್ಟಿತು. "ಆತನು ನನ್ನನ್ನು ಕೊಂದು ಹಾಕಿದರೂ, ನಾನು ಆತನನ್ನು ನಂಬುವೆನು" [ಯೋಬ 13:15] ಎಂಬುದು ಬಲಹೀನನ, ಹಿಂಜರಿಯುವ ತೊದಲು ಮಾತಾಡುವ ನೋಟದ ಭಾಷೆಯಾಗಿರುವದಿಲ್ಲ.[1]

ಟಿಪ್ಪಣಿ

[1]Adapted from W. T. Moore, "Faith and Sight," New Testament Christianity, vol. 1, ed. Z. T. Sweeney (Columbus, Ind.: By the Editor, 1923), 243-45.



© 2009 Truth for Today